ಕ್ರ.ಸ. 32

**ಮಾನ್ಯ ವಿಧಾನ ಪರಿಷತ್ತಿನ ಸದಸ್ಯರಾದ ಶ್ರೀ ಕೆ.ಎ.ತಿಪ್ಪೇಸ್ವಾಮಿ ಇವರು ಶೂನ್ಯ ವೇಳೆಯಲ್ಲಿ ಪ್ರಸ್ತಾಪಿಸಿರುವ ವಿಷಯದ ಬಗ್ಗೆ:**

**ಪ್ರಶ್ನೆ :**

ತೋಟಗಾರಿಕೆ ಇಲಾಖೆ ಅಧೀನದಲ್ಲಿರುವ ಹಾಪ್ ಕಾಮ್ಸ್ ವತಿಯಿಂದ ಗ್ರಾಹಕರಿಗೆ ವಿತರಿಸಲಾಗುವ ಹಣ್ಣುಗಳ ಬೆಲೆ ಮಾರುಕಟ್ಟೆಯಲ್ಲಿ ಮಾರಾಟವಾಗುವ ಹಣ್ಣುಗಳ ಬೆಲೆಗಿಂತ ಹೆಚ್ಚು ದುಬಾರಿಯಾಗಿ ಮಾರಾಟವಾಗುತ್ತಿವೆ. ಉದಾಹರಣೆಗೆ ಹಾಪ್ ಕಾಮ್ಸ್ ಸಂಸ್ಥೆ ತಾನು ಮಾರಾಟ ಮಾಡುವ ಉತ್ಪನ್ನಗಳ ಮೇಲೆ ಶೇಕಡ 33 ರಷ್ಟು ಆದಾಯದ ಮಿತಿ ಹಿಡಿಬೇಕೆಂದು ನಿಯಮ ರೂಪಿಸಲಾಗಿದೆ. ಆದರೆ ಈ ಸಂಸ್ಥೆ ಶೇ. 45 ರಿಂದ 70 ರವರೆಗೆ ಹಲವಾರು ಉತ್ಪನ್ನಗಳ ಮೇಲೆ ಲಾಭಾಂಶವನ್ನು ಇರಿಸಿದೆ. ಉದಾಹರಣೆಗೆ ಉತ್ತಮ ಗುಣಮಟ್ಟದ ಸ್ಟ್ರಾಬೇರಿ ಹಣ್ಣು ರೂ.45/- ಕ್ಕೆ ಮಾರುಕಟ್ಟೆಯಲ್ಲಿ ದೊರೆಯುತ್ತಿದ್ದರೆ. ಹಾಪ್ ಕಾಮ್ಸ್ ಸಂಸ್ಥೆ ಈ ಹಣ್ಣನ್ನು ರೂ.68/- ಕ್ಕೆ ಮಾರಾಟ ಮಾಡುತ್ತಿದೆ. ಮುಂದುವರೆದು, ಒಂದು ಕೆ.ಜಿ. ಕಪ್ಪು-ಕೃಷ್ಣ ದ್ರಾಕ್ಷಿಗೆ ಕೆ.ಆರ್.ಮಾರುಕಟ್ಟೆಯಲ್ಲಿ ರೂ.112/- ಇದ್ದರೆ, ಹಾಪ್ ಕಾಮ್ಸ್ ಸಂಸ್ಥೆಯಲ್ಲಿ ಕೆ.ಜಿ. ಒಂದಕ್ಕೆ ರೂ.190/- ಕ್ಕೆ ಮಾರಾಟವಾಗುತ್ತಿದೆ. ಅದೇ ರೀತಿ 1 ಕೆ.ಜಿ. ಹಸಿರು ದ್ರಾಕ್ಷಿಯ ಬೆಲೆ ಕೆ.ಆರ್.ಮಾರುಕಟ್ಟೆಯಲ್ಲಿ ರೂ.61/- ಇದ್ದರೆ ಹಾಪ್ ಕಾಮ್ಸ್ ನಲ್ಲಿ ರೂ.90/- ಇರುತ್ತದೆ.

ಮೇಲಿನ ಅಂಶಗಳಿಂದ ತಿಳಿದು ಬರುವುದೇನೆಂದರೆ, ಹಾಪ್ ಕಾಮ್ಸ್ ಸಂಸ್ಥೆಯಲ್ಲಿ ಸಗಟು ಮಾರಾಟದ ಬೆಲೆಯನ್ನು ಗಮನದಲ್ಲಿ ಇಟ್ಟುಕೊಳ್ಳದೇ ಚಿಲ್ಲರೆ ಮಾರಾಟದಲ್ಲಿ ಹಣ್ಣುಗಳ ದರವನ್ನು ನಿಗಧಿಪಡಿಸುತ್ತಿದ್ದು, ಗ್ರಾಹಕರಿಗೆ ಬಲವಾದ ಹೊಡೆದ ಬೀಳುತ್ತದೆ. ಹಾಪ್ ಕಾಮ್ಸ್ ಸಂಸ್ಥೆಯಲ್ಲಿ ತೋಟಗಾರರಿಂದ ನೇರ ಹಣ್ಣು ಹಂಪಲನ್ನು ಖರೀದಿಸುವ ವ್ಯವಸ್ಥೆ ಹೊಂದಿದ್ದು, ತಾನು ಮಾರಾಟ ಮಾಡುವ ಹಣ್ಣು ಹಣ್ಣು ಹಂಪಲುಗಳ ದರವನ್ನು ಕಡಿಮೆ ಇರಿಸಬೇಕಾಗುತ್ತದೆ. ಆದರೆ ಈ ಸಂಸ್ಥೆ ಅವೈಜ್ಞಾನಿಕ ಮತ್ತು ಲಾಭ ಮಾಡುವ ದಂಧೆಯಲ್ಲಿ ಗ್ರಾಹಕರ ಹಿತವನ್ನು ಕಡೆಗಣಿಸಿದೆ.

ಈ ಬಗ್ಗೆ ದಿನ ಪತ್ರಿಕೆ ಡೆಕ್ಕನ್ ಹೆರಾಲ್ಡ್ ನಲ್ಲಿ ದಿನಾಂಕ : 16.02.2023 ರಂದು ತುಲನಾತ್ಮಕ ಮತ್ತು ವಿವರವಾದ ವರದಿ ಪ್ರಕಟವಾಗಿದೆ. ಸಾರ್ವಜನಿಕ ಮಹತ್ವದ ವಿಷಯವನ್ನು ಶೂನ್ಯ ವೇಳೆಯಲ್ಲಿ ಸದನದಲ್ಲಿ ಪ್ರಸ್ತಾಪಿಸುತ್ತೇನೆ.

**ಉತ್ತರ :**

ಬೆಂಗಳೂರು ಹಾಪ್ ಕಾಮ್ಸ್ ಸಂಸ್ಥೆಯು ಸಹಕಾರಿ ಸಂಸ್ಥೆಯಾಗಿರುತ್ತದೆ. ಸಂಸ್ಥೆಯ ಖರೀದಿ ಮತ್ತು ಮಾರಾಟ ನಿಯಮಗಳ ಪ್ರಕಾರ ನಗರದಲ್ಲಿರುವ ಎ.ಪಿ.ಎಂ.ಸಿ. ಮಾರುಕಟ್ಟೆಗಳಿಗೆ ಹಾಗೂ ಇತರೆ ಸಗಟು ಮಾರುಕಟ್ಟೆಗಳಿಗೆ ಪ್ರತಿದಿನ ಭೇಟಿ ನೀಡಿ ಎ ದರ್ಜೆಯ ಸಂಸ್ಥೆಯಿಂದ ಚಿಲ್ಲರೆ ಮಾರಾಟಕ್ಕೆ ಸೂಕ್ತವಾಗಿರುವ ಗುಣಮಟ್ಟದ ಹಣ್ಣುಗಳ ಸಗಟು ದರಗಳ ಮಾಹಿತಿಗಳನ್ನು ಹಾಗೂ ಇದೇ ಗುಣಮಟ್ಟದ ವಿವಿಧ ಹಣ್ಣುಗಳ ಚಿಲ್ಲರೆ ಮಾರಾಟ ದರಗಳನ್ನು ಚಿಲ್ಲರೆ ಮಾರುಕಟ್ಟೆಯಿಂದ ಸಂಗ್ರಹಿಸಲು ಸಂಸ್ಥೆಯ ನೌಕರರನ್ನು ನಿಯೋಜಿಸಿ ಸದರಿ ನೌಕರರು ಸಗಟು ದರ ಮತ್ತು ಚಿಲ್ಲರೆ ಮಾರಾಟ ದರಗಳನ್ನು ಸಂಗ್ರಹಿಸುತ್ತಾರೆ. ಸದರಿ ದರಗಳ ಆಧಾರದ ಮೇಲೆ ಸಂಸ್ಥೆಯಿಂದ ಖರೀದಿ ಮತ್ತು ಮಾರಾಟ ದರಗಳನ್ನು ನಿಗಧಿಪಡಿಸಲಾಗುತ್ತಿರುತ್ತದೆ.

ಖರೀದಿ ದರಗಳ ಆಧಾರದ ಮೇಲೆ ಸಂಸ್ಥೆಯ ವೆಚ್ಚಗಳನ್ನು(ಸಿಬ್ಬಂದಿಗಳಿಗೆ ವೇತನ, ಮಾರಾಟ ವೆಚ್ಚ, ಆಡಳಿತಾತ್ಮಕ ವೆಚ್ಚಗಳು ಹಾಗೂ ಶಾಸನ ಬದ್ಧ ತೆರಿಗೆ ಇತ್ಯಾದಿ) ಸೇರಿಸಿ ಮಾರಾಟ ದರಗಳನ್ನು ನಿಗಧಿಪಡಿಸುತ್ತಿದ್ದು, ಸದರಿ ದರಗಳು ಬೆಂಗಳೂರು ನಗರ ವ್ಯಾಪ್ತಿಯಲ್ಲಿರುವ ಹಣ್ಣುಗಳ ಚಿಲ್ಲರೆ ಮಾರುಕಟ್ಟೆ (ಉದಾಹರಣೆಗೆ : ರಿಲೆಯನ್ಸ್ ಫ್ರೆಶ್, ಮೋರ್,

ನೀಲ್ ಗಿರೀಸ್, ಮೆಟ್ರೋ ಇತ್ಯಾದಿ) ದರಗಳಿಗೆ ಸಮಾನಾಂತರವಾಗಿರುವಂತೆ ಕ್ರಮವಹಿಸಲಾಗುತ್ತಿರುತ್ತದೆ.

ಸಂಸ್ಥೆಯ ಖರ್ಚು ವೆಚ್ಚಗಳನ್ನು ಸರಿದೂಗಿಸುವ ಸಲುವಾಗಿ ಸಂದರ್ಭಾನುಸಾರ ಖರೀದಿ ದರಗಳ ಮೇಲೆ ಕನಿಷ್ಟ ಶೇಕಡ 25 ರಿಂದ 33.33 ರವರೆಗೆ ಲಾಭಾಂಶವನ್ನಿರಿಸಿ ಮಾರಾಟ ದರಗಳನ್ನು ನಿಗದಿಪಡಿಸಲು ಅವಕಾಶವಿರುತ್ತದೆ. ಇದರಲ್ಲಿ ಶೇಕಡ 5 ರಿಂದ 8 ರಷ್ಟು ಪ್ರಮಾಣ ಬಾಡಿದ ಮತ್ತು ಕೊಳೆತ ಸವಕಳಿಯಾಗುತ್ತಿರುತ್ತದೆ.

ಕೆ.ಆರ್.ಮಾರುಕಟ್ಟೆಯಲ್ಲಿ ಉತ್ತಮ ಗುಣಮಟ್ಟದ ಎರಡು ಬಗೆಯ ಸ್ಟ್ರಾಬೇರಿ ಹಣ್ಣುಗಳು ಮಾರಾಟವಾಗುತ್ತಿದ್ದು, (ಸಿಂಗಲ್ ಲೇಯರ್ ಮತ್ತು ಡಬಲ್ ಲೇಯರ್) ಬೆಲೆಗಳಲ್ಲಿ ವ್ಯತ್ಯಾಸವಿರುತ್ತದೆ. ಸಿಂಗಲ್ ಲೇಯರ್ ಸ್ಟ್ರಾಬೇರಿ ಹಣ್ಣುಗಳಿಗೆ ಹೆಚ್ಚಿನ ಬೆಲೆ ಇರುತ್ತದೆ. ಹಾಪ್ ಕಾಮ್ಸ್ ಸಂಸ್ಥೆಯಲ್ಲಿ ಗ್ರಾಹಕರ ಬೇಡಿಕೆಯಂತೆ ಉತ್ತಮ ದರ್ಜೆಯ ಸಿಂಗಲ್ ಲೇಯರ್ ಸ್ಟ್ರಾಬೇರಿ ಹಣ್ಣುಗಳನ್ನು ಮಾತ್ರ ಮಾರಾಟ ಮಾಡಲಾಗುತ್ತಿರುತ್ತದೆ. ಅದೇ ರೀತಿ ಕಪ್ಪು ಮತ್ತು ಹಸಿರು ದ್ರಾಕ್ಷಿಗಳಲ್ಲೂ ಸಹ ವಿವಿಧ ತಳಿ ಮತ್ತು ಬಾಕ್ಸ್ ಗಳಿಗೆ ಅನುಸಾರವಾಗಿ ದರಗಳಲ್ಲಿ ವ್ಯತ್ಯಾಸವಿರುತ್ತದೆ. ಹಾಪ್ ಕಾಮ್ಸ್ ಸಂಸ್ಥೆಯಲ್ಲಿ ಉತ್ತಮ ದರ್ಜೆಯ ಕಪ್ಪು ಮತ್ತು ಹಸಿರು ದ್ರಾಕ್ಷಿ ಹಣ್ಣುಗಳನ್ನು ಮಾರಾಟ ಮಾಡಲಾಗುತ್ತಿರುತ್ತದೆ.

ಸಂಸ್ಥೆಯು ಸದಸ್ಯ ರೈತರ ಹಾಗೂ ಗ್ರಾಹಕರ ಹಿತವನ್ನು ಕಾಪಾಡುವ ದೃಷ್ಟಿಯಿಂದ ಸಂಘವು ರಚಿಸಿಕೊಂಡಿರುವ ನಿಯಮಗಳ ಪಾಲನೆಯೊಂದಿಗೆ ಕಾರ್ಯನಿರ್ವಹಿಸುತ್ತಿದೆ.

**HORTI 123 HGM 2023**

(ಮುನಿರತ್ನ)
ತೋಟಗಾರಿಕೆ ಹಾಗೂ ಯೋಜನೆ, ಕಾರ್ಯಕ್ರಮ
ಸಂಯೋಜನೆ ಮತ್ತು ಸಾಂಖ್ಯಿಕ ಸಚಿವರು